# ಒಳಗಣ್ಣು ತೆರೆಯಬೇಕು

ಸೆಪ್ಟಂಬರ್ 5ರಂದು ದೇಶದಾದ್ಯಂತ ಶಿಕ್ಷಕರ ದಿನಾಚರಣೆಯನ್ನು ಸಂಭ್ರಮವಾಗಿ ಆಚರಿಸಲಾಗಿದೆ. ಇದು ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಜನ್ಮದಿನದ ಪರ್ಯಾಯ ಸಂಭ್ರಮವೂ ಹೌದು. ಸರ್ವಮಾನ್ಯರಾದ ಸರ್ವೆಪಲ್ಲಿ ರಾಧಾಕೃಷ್ಣನ್ ಅವರು ಪ್ರಾಚ್ಯಪಾಶ್ಚಾತ್ಯ ತತ್ವಜ್ಞಾನದ ಖನಿಯಾಗಿದ್ದರು. ಅತ್ತ ಆಧುನಿಕತೆ, ಇತ್ತ ಪ್ರಾಚೀನತೆ ಇವೆರಡರ ಸಂಗಮವಾಗಿದ್ದರು.

ನಾವು ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟಮೇಲೆ ನಮ್ಮಲ್ಲಿ ಆಂಗ್ಲೋ ವೆರ್ನಾಕ್ಯೂಲರ್ ಶಾಲೆಗಳು ಪ್ರಾರಂಭವಾದದ್ದು ಸರಿಯಷ್ಟೆ. ಅದಕ್ಕನುಗುಣವಾಗಿ ಶಿಕ್ಷಕರನ್ನು ತಯಾರಿಸಿ ನೇಮಿಸಲಾಯಿತು. 'ಟೀಚರ್ ಎಂಬ ಮಾತಿಗೆ ನಮ್ಮಲ್ಲಿ 'ಶಿಕ್ಷಕ ಎಂದು ಹೆಸರಿಸಲಾಯಿತು. ಆಧುನಿಕ ಪಾಠಪದ್ಧತಿಗಳು ಮೆಕಾಲೆ ರೂಪಿಸಿದ ಶಿಕ್ಷಣಸಿದ್ಧಾಂತಕ್ಕೆ ಅನುಗುಣವಾಗಿ ಬೋಧಿಸಲು ಪ್ರಾರಂಭಿಸಲಾಯಿತು. ಇದಕ್ಕೂ ಮೊದಲು ನಮ್ಮಲ್ಲಿದ್ದ ಗುರುಕುಲ ಪದ್ಧತಿಯ ಶಿಕ್ಷಣ ಹಿಂದಕ್ಕೆ ಸರಿಯಿತು. ಈ ಶಿಕ್ಷಣ ಪದ್ಧತಿಯಲ್ಲಿ ವ್ಯಾವಹಾರಿಕ ಮತ್ತು ಪಾರಮಾರ್ಥಿಕ ತಿಳಿವಳಿಕೆಗಳು ಸಂಗಮಗೊಂಡಿದ್ದವು. ಇಲ್ಲಿ ಆಚಾರ್ಯನು ನಿರ್ದೇಶಕ ಸ್ಥಾನದಲ್ಲಿ ಇರುತ್ತಿದ್ದ. ಅವನು ಗುರುಸ್ಥಾನದಲ್ಲಿದ್ದು ಶಿಷ್ಯನಿಗೆ ಸಮಸ್ತ ಜ್ಞಾನವನ್ನು ನೀಡುತ್ತಿದ್ದ. ಈ ಚಿತ್ರವು ಕಾಲಕ್ರಮೇಣ ಬ್ರಿಟಿಷ್ ಶಿಕ್ಷಣಪದ್ಧತಿಯ ಆಕ್ರಮಣದ ಮೂಲಕ ನಿರಸನಗೊಳ್ಳಲು ಪ್ರಾರಂಭವಾಯಿತು. ಗುರುವಿನ ಸ್ಥಾನದಲ್ಲಿ ಶಿಕ್ಷಕ ಬಂದು ಕುಳಿತ. ಶಿಷ್ಯನ ಜಾಗದಲ್ಲಿ ವಿದ್ಯಾರ್ಥಿ ಆಕ್ರಮಿಸಿಕೊಂಡ. ಇದು ವಸಾಹತುಶಾಹಿಯ ಸಂಕೇತವಾಗಿ ನಮ್ಮಲ್ಲಿ ಬೆಳೆಯಿತು. ಈ ಶಿಕ್ಷಣಕ್ರಮದಲ್ಲಿ ಉತ್ತಮಾಂಶ ಇಲ್ಲವೆಂದು ನಾನು ಸುತಾರಾಂ ಹೇಳಲಾರೆ. ಆದರೆ, ಭಾರತೀಯ ಶಿಕ್ಷಣ ಪದ್ಧತಿಯ ಮೂಲಾಂಶದ ಮೇಲೆ ಅತಿಕ್ರಮಣವಾಗಿದ್ದು ಮಾತ್ರ ಸತ್ಯ. ನಾವು ಈ ಸಂಗತಿಯನ್ನು ಮರೆಯುವಂತಿಲ್ಲ.

ಆಧುನಿಕ ಶಿಕ್ಷಣ ಪದ್ಧತಿಯು ವ್ಯಾವಹಾರಿಕಸತ್ತೆಯನ್ನು ನಿರಂತರವಾಗಿ ಪ್ರತಿಪಾದಿಸುತ್ತದೆ. ಇಲ್ಲಿ ತಾಂತ್ರಿಕತೆಗೆ ಪರಮ ಪ್ರಾಧಾನ್ಯ. ಆದರೆ, ಇಲ್ಲಿ ಭಾವನಾಂಶ ಮತ್ತು ಕಲ್ಪನಾಂಶಗಳು ಹಿಂದಕ್ಕೆ ಸರಿದಿರುವುದಂತೂ ಸತ್ಯಸ್ಯಸತ್ಯ. ನಾವು ಶಿಕ್ಷಕ ಸ್ಥಾನವನ್ನು ಒಪ್ಪಿಕೊಂಡುಬಿಟ್ಟಿದ್ದೇವೆ. ಇದು ಬೇಕೋ ಬೇಡವೋ ಎಂಬ ಪ್ರಶ್ನೆಗೆ ಈಗ ಅವಕಾಶವಿಲ್ಲ. ಆದರೆ, ಶಿಕ್ಷಕ ಎಂಬ ಪರಿಭಾಷೆಯ ಅಂತರ್ಯದಲ್ಲಿರುವ 'ಲೋಕಾರ್ಥ ಎಂಬ ಆಶಯದ ಜೊತೆಗೆ, 'ಪರಮಾರ್ಥ ಎಂಬ ಮಾತಿಗೂ ಅವಕಾಶ ಕಲ್ಪಿಸಿಕೊಡುವುದು ಅಗತ್ಯವಿದೆ. ಇಂದಿನ ಶಿಕ್ಷಕ ಕೇವಲ ವ್ಯಾವಹಾರಿಕಸತ್ತೆಯಿಂದ ಉಪಜೀವಿಸುತ್ತಿದ್ದಾನೆ. ಆದರೆ, ಅವನಲ್ಲಿ ಪಾರಮಾರ್ಥಿಕಸತ್ತೆಗೂ ಅವಕಾಶ ನೀಡಬೇಕಾಗಿದೆ. ಕನ್ನಡದ ಮುಖ್ಯ ಕವಿಗಳಾದ ಬೇಂದ್ರೆ ಮತ್ತು ಕುವೆಂಪು ಗುರುವಿನ ಬಗೆಗೆ ಕವಿತೆಗಳನ್ನು ರಚಿಸಿದ್ದಾರೆ. ಅವರ ರಚನೆಗಳಲ್ಲಿ ಲೋಕಸತ್ತೆ ಮತ್ತು ಪರಮಾರ್ಥಸತ್ತೆಗಳ ಸಂಗಮವನ್ನು ನಾವು ಕಾಣಬಹುದು. ಇಲ್ಲಿ ನಾನು ಹೇಳಲು ಪ್ರಯತ್ನಿಸುತ್ತಿರುವ ಮಾತುಗಳಿಗೆ ಅವರು ಕೀಲಿಕೈಯಾಗಿದ್ದಾರೆ.

ಕವಿ ಬೇಂದ್ರೆಯವರ ಈ ಕವಿತೆ ಬಲು ಮಾರ್ಮಿಕವಾಗಿದೆ. ಇಲ್ಲಿ 'ಇರವು ಮತ್ತು ಅರಿವುಗಳ ಸಂಗಮಸ್ಥಾನವನ್ನು ಬೇಂದ್ರೆ ಗುರುತಿಸಿಕೊಂಡಿದ್ದಾರೆ. ಗುರುವಿನ ಅನುಗ್ರಹವಿಲ್ಲದೆ ಶಿಷ್ಯನ ಏಳ್ಗೆಯಿಲ್ಲ. ಶಿಷ್ಯನಲ್ಲಿ ಅರಿವಿನ ಸ್ಫೋಟವಾಗಬೇಕಾದರೆ ಗುರುವಿನ ಸಂಪೂರ್ಣ ಅನುಗ್ರಹ ಬೇಕೇ ಬೇಕು. ಶಿಷ್ಯನು ಗುರುವನ್ನು ಅರಸುವ ಪರಿಯನ್ನು ಕುರಿತು ಈ ಕವಿತೆ ಹೇಳುತ್ತದೆ:

ಶ್ರೀ ಗುರುವೆ ಅರುವೆ  
ಶರಣಾಗಿ ಬರುವೆ  
ಕರುಣೆಯಿಡು ಕೋರಿಬರುವೆ  
ಆ ಪಾದಪದ್ಮ ಎದೆಗೆತ್ತಿಕೊಂಬೆ  
ನಡುನೆತ್ತಿಗೆತ್ತಿ ಕೊಂಬೆ  
ಉಸಿರಿಂದಲದನೆ ಬಲಗೊಂಬೆ  
ನನ್ನ ಕಣ್ಗೆತ್ತಿವೊತ್ತಿಕೊಂಬೆ

ಈ ಕವಿತೆಯ ಸಾಲುಗಳಲ್ಲಿ ಶಿಷ್ಯನಿದ್ದಾನೆಯೆ ಹೊರತು; ವಿದ್ಯಾರ್ಥಿ ಇಲ್ಲವೆಂಬುದನ್ನು ಗಮನಿಸಬೇಕು. ನಮಗೆ ಲೋಕವಿದ್ಯೆ ಬೇಕು. ಆದರೆ, ಅಲ್ಲಿಗೆ ನಿಲ್ಲುವುದು ಎಂದಿಗೂ ಸಲ್ಲದು. ಲೋಕವಿದ್ಯೆಯು ಹಣ, ಅಧಿಕಾರ, ಅಂತಸ್ತು ಮತ್ತು ಅಹಂಕಾರವನ್ನು ನಮಗೆ ತಂದುಕೊಡುತ್ತದೆ. ಆದರೆ, ಲೋಕವಿದ್ಯೆಯ ಜೊತೆಗೆ ಪಾರಮಾರ್ಥಿಕ ವಿದ್ಯೆ ಜೊತೆ ಗೂಡಿದಾಗ ಸಂಭವಿಸುವ ಗುಣಾಂಶಗಳೇ ಬೇರೆ. ಪಠ್ಯಪುಸ್ತಕಗಳೊಡನೆ ಇಂದು ನಾವು ಬದುಕಿದ್ದೇವೆ. ಅಲ್ಲಿ ಕೇವಲ ಅಂಕಗಳ ಸಂಪಾದನೆಯೇ ಮುಖ್ಯವಾಗಿದೆ. ಅಲ್ಲಿ ಒಳತಿಳಿಬೆಳಕಿನ ಭಾವಾಂಶಗಳು ಇಲ್ಲವಾಗಿಬಿಟ್ಟಿವೆ. ಕವಿ ಕುವೆಂಪು ಅವರ ಕವಿತೆ ಹೀಗಿದೆ:

ಮನ್ಮನೋಮಂದಿರಕೆ  
ಓ ಲೋಕ ಗುರುಗಳೆಲ್ಲ  
ಬನ್ನಿ ಬನ್ನಿ ಬನ್ನಿ ತುಳಿಯೆ  
ನಿಮ್ಮ ಪದತಲ  
ದಲ ದಲ ದಲ  
ಅರಳ್ವುದೆನ್ನ ಶಿರಃಕಮಲಕುಟ್ಮಲ  
ತಮೋತಿಮಿರವಳಿಯಲಲ್ಲಿ  
ಪರಂಜ್ಯೋತಿ ಬೆಳಗಲಿ  
ಋತದ ಶಿವದ ಆನಂದದ  
ಚಿದ್‌ವಿಭೂತಿ ತೊಳಗಲಿ

ಈ ಕವಿತೆಯು ರೂಪಕಾತ್ಮಕ ನೆಲೆಯಲ್ಲಿ ಗುರುವಿನ ಮಹತ್ವವನ್ನು ನಮಗೆ ತಿಳಿಸಿಕೊಡುತ್ತದೆ. ಕುವೆಂಪು ಅವರೆ ಒಂದು ಕಡೆ 'ನರಗುರು ನಿಮಿತ್ತಮಾತ್ರನ್ ಎಂದಿದ್ದಾರೆ. ಈ ಮಾತು ನಿಜ. ನಾವು ಶಿಕ್ಷಕ ಮತ್ತು ವಿದ್ಯಾರ್ಥಿ ಎಂಬ ಸಾಮಾನ್ಯಸತ್ತೆಯ ಜತೆಗೆ ಗುರು ಮತ್ತು ಶಿಷ್ಯ ಎಂಬ ಪರಮಾರ್ಥಸತ್ತೆಯ ತಾತ್ವಿಕಾರ್ಥ ಜತೆಗೂಡಿಸುವುದು ಅಗತ್ಯವಿದೆ. ಹೀಗಾದಾಗ, ಶಿಕ್ಷಕನ ಅಂತರ್ಯದಲ್ಲಿ ಗುರುವು ನೆಲೆಗೊಳ್ಳುತ್ತಾನೆ. ವಿದ್ಯಾರ್ಥಿಯ ಮಸ್ತಿಷ್ಕದಲ್ಲಿ ಶಿಷ್ಯಭಾವ ಉತ್ತಮಣಗೊಳ್ಳುತ್ತದೆ. ನಮ್ಮ ಶಿಕ್ಷಣ ವ್ಯವಸ್ಥೆಯು ಏಕಮುಖೀ ನೆಲೆಯಿಂದ ಬಹುಮುಖೀ ನೆಲೆಗೆ ತಲುಪಿ ಅಲ್ಲಿ ಒಳಗಣ್ಣು ತೆರೆದಂತಾಗುತ್ತದೆ.

■ **ಪುರಂಜೀವಿ**

## ಮಾತೇ ಮುತ್ತು

★ ಅವನಿಗೆ ಏನೂ ಗೊತ್ತಿರುವುದಿಲ್ಲ, ಆದರೆ ಎಲ್ಲವೂ ಗೊತ್ತಿದೆಯೆಂದು ತಿಳಿದುಕೊಳ್ಳುತ್ತಾನೆ. ಅವನ ಮುಂದಿನ ದಾರಿ ರಾಜಕೀಯ.

—ಜಾರ್ಜ್ ಬರ್ನಾರ್ಡ್ ಷಾ

★ ಯಾವುದೇ ಕೆಲಸವನ್ನು ಸಂತೋಷದಿಂದ ಮಾಡಿದರೆ ಅದರಲ್ಲಿ ಪರಿಪೂರ್ಣತೆ ಸಾಧ್ಯ.

—ಅರಿಸ್ಟಾಟಲ್

★ ಕಷ್ಟಗಳು ಇರುವುದು ಧೈರ್ಯಗುಂದಲು ಅಲ್ಲ; ಕಷ್ಟಗಳಿದ್ದರೆ ಮಾತ್ರ ವ್ಯಕ್ತಿತ್ವ ದೃಢವಾಗುತ್ತದೆ.

—ವಿಲಿಯಂ ಚಾನಿಂಗ್

★ ಬಂದ ಸುಖವ ಬಿಡಬೇಡ , ಬಾರದುದ ಬೇಕೆಂದು ಬಯಸಬೇಡ.

—ರತ್ನಾಕರ ವರ್ಣಿ

★ ಜೀವನ ಅಂದ ಮೇಲೆ ಅಪಾಯ ಇದ್ದೇ ಇರುತ್ತದೆ.

—ರಾಲ್ಫ್ ಎಮರ್ಸನ್

★ ಗೆಳೆತನ ಉಳಿಯಬೇಕೆಂದರೆ ಉದಾರಗುಣ ಅವಶ್ಯಕ.

—ಆಸ್ಕರ್ ವೈಲ್ಡ್

★ ಮನುಷ್ಯನೆಂದರೆ ಆಹಾರವನ್ನು ತುಂಬಿಸುವ ಒಂದು ಚೀಲ.

—ಜಾರ್ಜ್ ಆರ್ವೆಲ್

★ ಮೃದುವಾಗಿದ್ದರೆ ಅವಮಾನಿಸುತ್ತಾರೆ. ಉಗ್ರವಾಗಿದ್ದರೆ ಉದ್ವೇಗಪಡುತ್ತಾರೆ. ಆದ್ದರಿಂದ ಯಥೋಚಿತವಾಗಿ ಉಗ್ರನೂ ಮೃದುವೂ ಆಗಿರು.

—ಮಹಾಭಾರತ

★ ಪ್ರಿಯವಾದ ಮಾತುಗಳನ್ನಾಡುವುದರಿಂದ ಸಂತೋಷಪಡುತ್ತಾರೆ. ಮಾತಿಗೇನು ಬಡತನ.

—ಸುಭಾಷಿತ